

# ಲ್ಯಾಪ್‌ಟಾಪ್ ಖರೀದಿಸುತ್ತಿದ್ದೀರಾ?

■ **ಜೆ.ಸಿ.ಜಾಧವ**

ಲ್ಯಾಪ್ ಟಾಪ್ ಬಹೂಪಯೋಗಿ. ಕೊಳ್ಳುವ ಮುನ್ನ ತಮ್ಮ ಅಗತ್ಯವೇನು, ಅದಕ್ಕೆ ತಕ್ಕುದಾದ್ದು ಯಾವುದು ಎನ್ನುವುದನ್ನು ಖಚಿತ ಪಡಿಸಿಕೊಳ್ಳಬೇಕು.

ಮಾರುಕಟ್ಟೆಯಲ್ಲಿ ನಾವು ಯಾವುದಾದರೂ ವಸ್ತುವನ್ನು ಕೊಳ್ಳುವಾಗ ಅವುಗಳ ಸೌಲಭ್ಯದ ಆಧಾರದ ಮೇಲೆ ಆ ವಸ್ತುವಿನ ದರ ನಿರ್ಧಾರ-ವಾಗುತ್ತದೆ. ಹಾಗೆಯೇ ಎಲೆಕ್ಟ್ರಾನಿಕ್ ವಸ್ತುಗಳದ್ದೂ ಕಾರ್ಯಕ್ಷಮತೆ ಹಾಗೂ ದತ್ತಾಂಶ ಸಂಗ್ರಹದ ಆಧಾರದ ಮೇಲೆ ಬೆಲೆ ನಿಗದಿಯಾಗಿರುತ್ತದೆ. ಲ್ಯಾಪ್-ಟಾಪ್ ನ ಕಾನ್ಫಿಗ್ಯುರೇಷನ್(ವಿನ್ಯಾಸ ಹಾಗೂ ಕಾರ್ಯಕ್ಷಮತೆ) ಹಾಗೂ ಬ್ರ್ಯಾಂಡ್ ಮೇಲೆಯೂ ಈ ಬೆಲೆ ಹೊಂದಿಕೊಂಡಿದೆ. ಲ್ಯಾಪ್-ಟಾಪ್ ಕೊಳ್ಳುವಾಗ ಗಮನಿಸಬೇಕಾದ ಕೆಲವು ಅಂಶಗಳನ್ನು ತಿಳಿಯೋಣ.

★ **ಪ್ರೊಸೆಸರ್** (Processor): ಮಾರುಕಟ್ಟೆಯಲ್ಲಿ ಎರಡು ರೀತಿಯ ಪ್ರೊಸೆಸ್ಸರಗಳು ಲಭ್ಯವಿವೆ. ಅವುಗಳಲ್ಲಿ ಒಂದು 'ಇಂಟೆಲ್' ಹಾಗೂ ಇನ್ನೊಂದು AMD (Advanced Micro Divices). ಈ ಎರಡೂ ಪ್ರೊಸೆಸರ್‌ಗಳಲ್ಲಿ ಹಲವಾರು ವಿಧಗಳಿವೆ. ಸರ್ವಸಾಮಾನ್ಯವಾಗಿ ಇಂಟೆಲ್ ಕೊರ್ i3 ಪ್ರೊಸೆಸರ್ ನಿಂದ ಪ್ರಾರಂಭ. (4ನೇ ಜನರೇಷನ್ ಅಪೇಕ್ಷಣೀಯ.) ಅದೇ ಸ್ವಲ್ಪ ಕಡಿಮೆ ದರದಲ್ಲಿ ಹಾಗೂ ಲ್ಯಾಪ್-ಟಾಪ್ ನಿಂದ ಕಡಿಮೆ ಕೆಲಸ ಅಪೇಕ್ಷಿಸುವವರು AMD Apu ಪ್ರೊಸೆಸರ್‌ಗೆ ಒತ್ತು ಕೊಡಬಹುದು.

★ **ರಾಮ್** (RAM): ಲ್ಯಾಪ್-ಟಾಪ್ ನಲ್ಲಿಯ ಎಲ್ಲಾ ಕೆಲಸದ ವೇಗವು ರಾಮ್ ಮೇಲೆ ಅವಲಂಬಿತವಾಗಿರುತ್ತದೆ. ಈಗಿನ ದಿನಗಳಲ್ಲಿ ಕಡಿಮೆ ಎಂದರೆ 4 GB RAM ಪ್ರಾರಂಭವಾಗುತ್ತದೆ. ಅಷ್ಟೇನೂ ಕೆಲಸವಿಲ್ಲವೆಂದರೆ 4 GB RAM ಸಾಕಾಗುತ್ತದೆ. ಇನ್ನೂ ಸ್ವಲ್ಪ ಹೆಚ್ಚಿಗೆ ಕೆಲಸವನ್ನು ನಿರೀಕ್ಷಿಸುವವರಾದರೆ ರೂ.1000/- ಹೆಚ್ಚಿಗೆ ನೀಡಿದರೆ 8 GB RAM ವರೆಗೆ ಪಡೆಯಬಹುದು.

★ **ಗ್ರಾಫಿಕ್ ಕಾರ್ಡ್** (Graphic Card): ವಿಡಿಯೋ ಎಡಿಟಿಂಗ್, ಫೋಟೊಶಾಪ್ ಮತ್ತು ಗೇಮ್ ಗಳನ್ನು ಜಾಸ್ತಿ ಉಪಯೋಗಿಸುವುದಿಲ್ಲ ಎಂದಾದರೆ GPU(Graphic Processing Unit) ಬೇಕೆಂದೇನಿಲ್ಲ. ಸಿಸ್ಟಮ್ ನಲ್ಲಿರುವ ಇಂಟೆಲ್ ಮತ್ತು AMD GPU ಸಾಕಾಗುತ್ತದೆ. ಆದರೆ ಹೆಚ್ಚಿನ GPU ಬೇಕಾದರೆ, ಕನಿಷ್ಠ 2GB ಗ್ರಾಫಿಕ್ ಕಾರ್ಡ್ ಪಡೆಯುವುದು ಅವಶ್ಯ.

★ **ಸಂಗ್ರಹ ಸ್ಥಳ** (Storage space): 500 GB ಇಂದ 2TB ವರೆಗೆ ಸ್ಥಳಾವಕಾಶ ಪಡೆಯಬಹುದು.

★ **ಸ್ಕ್ರೀನ್ ಅಳತೆ** (Display Space): ಲ್ಯಾಪ್-ಟಾಪ್ ಸ್ಕ್ರೀನ್ ಗಳು 11.6 ಇಂಚಿನಿಂದ 17 ಇಂಚಿನವರೆಗೆ ಲಭ್ಯವಿವೆ. ಸಾಮಾನ್ಯವಾಗಿ 13.3 ಅಥವಾ 14 ಇಂಚಿನ ಸ್ಕ್ರೀನ್ ಸಾಕಾಗುತ್ತದೆ. ಓಡಾಡುವಾಗಲೂ ಲ್ಯಾಪ್‌ಟಾಪ್ ಉಪಯೋಗಿಸುವವರು ಸಾಧ್ಯವಾದಷ್ಟು ಹಗುರ ಮತ್ತು ಕಡಿಮೆ ಸ್ಕ್ರೀನ್ ಕಡೆಗೆ ಗಮನ ಕೊಡಬಹುದು.

★ **ಪೋರ್ಟ್ಸ್** (Ports): ಪ್ರತಿಯೊಂದು ಲ್ಯಾಪ್-ಟಾಪ್ USB 3.0 ನ 2USB ಪೋರ್ಟ್ ಗಳನ್ನು ಕಡ್ಡಾಯವಾಗಿ ನೀಡುತ್ತವೆ. ಆದರೆ 3USB ಪೋರ್ಟ್ ಇರುವುದು ಒಳ್ಳೆಯದು. ಹಾಗೆಯೇ ಇಥರ್ ನೆಟ್, HDMI ಹಾಗೂ SD ಕಾರ್ಡ ರೀಡರ್ ಇರುವುದು ಅವಶ್ಯ, ಮತ್ತು ಲ್ಯಾಪ್-ಟಾಪ್ ಅನ್ನು ಪ್ರಾಜೆಕ್ಟರ್ ಗೆ ಕನೆಕ್ಟ್ ಮಾಡಬೇಕಾದರೆ D-Sub ಅಥವಾ VGA ಪೋರ್ಟ್ ಇರುವುದು ಅವಶ್ಯ.

★ **ಆಪರೇಟಿಂಗ್ ಸಿಸ್ಟಮ್** (Operating System): ಲ್ಯಾಪ್-ಟಾಪ್ ಕಾರ್ಯ ನಿರ್ವಹಿಸಲು ಆಪರೇಟಿಂಗ್ ಸಿಸ್ಟಮ್ ಅವಶ್ಯ. ಈಗ ವಿಂಡೋಜ್10 ಹೊಸದಾದ ಆಪರೇಟಿಂಗ್ ಸಿಸ್ಟಮ್ ಬಂದಿದೆ. ಇದು ವಿಂಡೋಜ್ 8 ಗಿಂತ ಕಾರ್ಯಕ್ಷಮತೆಯಲ್ಲಿ ಚೆನ್ನಾಗಿದೆ.

★ **ಬ್ಯಾಟರಿ ಬಾಳಿಕೆ** (Battery Life): ಬ್ಯಾಟರಿ ಬಾಳಿಕೆ ಬಗ್ಗೆ ಆಯಾ ಕಂಪನಿಯವರು ನಿಗದಿತ ಗಡುವು ನೀಡಿರುತ್ತಾರೆ. ನೀವು ಬಳಸುವಲ್ಲಿ ಇಲೆಕ್ಟ್ರಿಕ್ ಕನೆಕ್ಷನ್ ಇದ್ದರೆ, ಇಲೆಕ್ಟ್ರಿಕ್ ಸಾಕೆಟ್ ಗೆ ಜೋಡಿಸಿ ಉಪಯೋಗಿಸುವುದು ಒಳ್ಳೆಯದು. ಇದರಿಂದ ಬ್ಯಾಟರಿ ಹೆಚ್ಚು ಕಾಲ ಬಾಳಿಕೆ ಬರುತ್ತದೆ.

★ **ಬ್ರ್ಯಾಂಡ್** (Brand): ಎಲ್ಲಾ ಲ್ಯಾಪ್-ಟಾಪ್ ಗಳು ರೂ.20,000/- ದಿಂದ ದೊರೆಯುತ್ತವೆ. ಹೆಚ್ಚಾಗಿ ಎಲ್ಲಾ ಸ್ಥಳಗಳಲ್ಲಿ ದೊರೆಯುವ ಬ್ರ್ಯಾಂಡ್ ಗಳು ಹೆಚ್.ಪಿ., ಡೆಲ್, ಲೆನೊವೊ. ಹಾಗೆಯೇ ಆಸಸ್, ಎಸರ್ ಮತ್ತು ತೋಷಿಬಾ ಬ್ರ್ಯಾಂಡ್‌ಗಳ ಕೆಲವು ಸ್ಥಳಗಳಲ್ಲಿ ದೊರೆಯುತ್ತವೆ. ನೀವಿರುವ ಸ್ಥಳದಲ್ಲಿ ಒಳ್ಳೆಯ ಸೇವೆ ನೀಡುವ ಡೀಲರ್‌ಗಳಲ್ಲಿ ದೊರೆಯುವ ಬ್ರ್ಯಾಂಡ್‌ನ ಲ್ಯಾಪ್-ಟಾಪ್ ಕೊಳ್ಳುವುದು ಒಳ್ಳೆಯದು. ಲ್ಯಾಪ್-ಟಾಪ್ ನಲ್ಲಿ ಏನಾದರೂ ತೊಂದರೆ ಕಾಣಿಸಿದರೆ ತಕ್ಷಣ ಡೀಲರ್‌ಗಳು ಕಂಪನಿಯನ್ನು ಸಂಪರ್ಕಿಸಿ ಸಮಸ್ಯೆ ನಿವಾರಿಸುವುದು ಸುಲಭವಾಗಲಿದೆ.